ವಿದ್ಯಾರ್ಥಿನಿಯರಿಗೆ ವಸತಿ ನಿಲಯದ ಅವಶ್ಯಕತೆ.

33(206) ಶ್ರೀ ಗಂಗಾಧರ ನಾಗೇಶ ಭಟ್(ಕಾರವಾರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜೊಯಿಡಾ ತಾಲ್ಲೂಕಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಿ.ಸಿ,ಎಂ. ಹಾಸ್ಟೆಲ್‌ಗಳು ಯಾವುವು;

ಆ) ಇವುಗಳಲ್ಲಿ ವಿದ್ಯಾರ್ಥಿನಿಯರಿಗಾಗಿ ಇರುವ ವಸತಿ ನಿಲಯಗಳು ಯಾವುವು;

ಇ) ಜೊಯಿಡಾದಲ್ಲಿ ವಿದ್ಯಾರ್ಥಿನಿಯರಿಗಾಗಿ ವಸತಿ ನಿಲಯಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಈ) ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಗಂಗಾಧರ್ ನಾಗೇಶ ಭಟ್(ಸಮಾಜ ಕಲ್ಯಾಣ ಸಚಿವರು):

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿನ ಜೊಯಿಡಾ ತಾಲ್ಲೂಕಿನಲ್ಲಿನ ಹಿಂದುಳಿದ ವರ್ಗಗಳ 6 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿವೆ, ಇವುಗಳ ಪೈಕಿ ಜೊಯಿಡಾದಲ್ಲಿ ಒಂದು ಬಾಲಕಿಯರ ವಿದ್ಯಾರ್ಥಿ ನಿಲಯವಿದೆ ವಿವರಗಳು ಕೆಳಗೆ ನಮೂದಿಸಿದೆ.

ಕ್ರಮ ಸಂಖ್ಯೆ	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯದ ಹೆಸರು	ಬಾಲಕ ಬಾಲಕಿ	ಮಂಜೂರಾತಿ
1.	ಜೊಯಿಡಾ ಟೌನ್	ಬಾಲಕಿ	50
2.	ಜೊಯಿಡಾ	ಬಾಲಕ	50
3.	ಉಳವಿ	ಬಾಲಕ	50
4.	ಕುಂಬಾರವಾಡ	ಬಾಲಕ	50
5.	ಕ್ಯಾನಲ್‌ವಾಕ್	ಬಾಲಕ	50
6.	ಜಗಲಬೇಟೆ	ಬಾಲಕ	50

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಗಂಗಾಧರ್ ನಾಗೇಶ್ ಭಟ್ : ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವಂತಹ ಪ್ರಶ್ನೆಗೆ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಉತ್ತರ ಹೇಳುತ್ತಿದ್ದಾರೆ. ನಾನು ಹೋದಬಾರಿ ಇದೇ ಪ್ರಶ್ನೆಯನ್ನು ಸದನದಲ್ಲಿ ಕೇಳಿದ್ದೆನು. ನನಗೆ ಬರುವುದು ಕಾರವಾರ ಮತ್ತು ಜೋಯಿಡಾ ಕ್ಷೇತ್ರಗಳು. ಅದರಲ್ಲಿ ಅತೀ ದೊಡ್ಡದಾದ ಕ್ಷೇತ್ರವೆಂದರೆ ಜೋಯಿಡಾ. ಅದು ಕಾರವಾರಕ್ಕಿಂತ ಮೂರು ಪಟ್ಟಿ ದೊಡ್ಡದಿದೆ. ಅದರಲ್ಲಿ 15 ಪಂಚಾಯತಿಗಳು ಇವೆ. ಅದರಲ್ಲಿ ಕೇವಲ ಎಂಟು ಪಂಚಾಯಿತಿ ಕ್ಷೇತ್ರದಲ್ಲಿ ಸ್ಕೂಲ್‌ಗಳು ಇದೆ. ಬಾಕಿ ಪಂಚಾಯಿತಿ ವ್ಯಾಪ್ತಿಯಲ್ಲಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳು ಮಾತ್ರ ಇದೆ. ಅದರಲ್ಲಿ ಸುಮಾರು 15 ರಿಂದ 20 ಕಿಲೋಮೀಟರ್ ಅಂತರದಲ್ಲಿ ಒಂದು ಪಂಚಾಯಿತಿಯಿಂದ ಇನ್ನೊಂದು ಹಳ್ಳಿಗೆ ನಡೆದುಕೊಂಡು ಹೋಗಬೇಕಾಗುತ್ತದೆ. ಅದೂ ಕೂಡ ದಟ್ಟವಾದ ಅಡವಿ. ಈ ಕ್ಷೇತ್ರದಲ್ಲಿ ಒಂದೆ ಒಂದು ಬಾಲಕಿಯರ ಹಾಸ್ಟೆಲ್ ಇದೆ. ಅದು ಸಾಕಾಗುವುದಿಲ್ಲವೆಂದು ಜನ ಸಂಪರ್ಕ

ಸಭೆಯಲ್ಲಿ ಚರ್ಚೆಯಾಗಿದೆ. ಅದಕ್ಕಾಗಿ ಅಲ್ಲಿ ಒಂದು ಬಾಲಕಿಯರ ಹಾಸ್ಟೆಲ್ ಅವಶ್ಯಕತೆ ಇದೆ. ಅಲ್ಲಿ ವಾಹನ ಸೌಕರ್ಯ ಯಾವುದೂ ಇಲ್ಲ. ಅಲ್ಲಿ ರಸ್ತೆಗಳೂ ಕೂಡ ಸರಿಯಾಗಿ ಇಲ್ಲ. ಸುಮಾರು 10–20 ಕಿಲೋಮೀಟರ್ ನಡೆದುಕೊಂಡು ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಹುಡುಗಿಯರು ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಯ ನಂತರ ಮನೆಯಲ್ಲೇ ಕುಳಿತುಕೊಳ್ಳುತ್ತಾರೆ. ಅದಕ್ಕಾಗಿ ಆ ಹಾಸ್ಟೆಲ್‌ಗಳ ಅವಶ್ಯಕತೆ ಇದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ.

ಡಾ: ವೈ. ನಾಗಪ್ಪ(ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳುತ್ತಿರುವಂತಹ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸಲಾಗಿದೆ. ಮಾನ್ಯ ಸದಸ್ಯರು ಕೇಳಿರುವಂತೆ ಜೊಯಿಡಾ ಟೌನ್‌ನಲ್ಲಿ ಒಂದು ಬಾಲಕಿಯರ ವಿದ್ಯಾರ್ಥಿ ನಿಲಯ ಇದೆ. ಮತ್ತು ಜೊಯಿಡಾದಲ್ಲಿ ಬಾಲಕರ ವಿದ್ಯಾರ್ಥಿ ನಿಲಯ ಇದೆ, ಅದೇ ರೀತಿಯಲ್ಲಿ ಉಳವಿ, ಕುಂಬಾರವಾಡ, ಕ್ಯಾನಲ್‌ರಾಕ್, ಜಗಲಪೇಟೆ, ಎಲ್ಲಾ ಕಡೆಗಳಲ್ಲೂ ಬಾಲಕರ ವಿದ್ಯಾರ್ಥಿ ನಿಲಯಗಳು ಇವೆ. ಈಗ ಮಾನ್ಯ ಸದಸ್ಯರು, ಬಾಲಕಿಯರ ಹಾಸ್ಟೆಲ್ ಅನ್ನು ಕೇಳಿದ್ದಾರೆ, ಆದರೆ ನಮ್ಮ ಇಲಾಖೆಗೆ ಯಾವ ಪ್ರಸ್ತಾವನೆ ಬಂದಿಲ್ಲ. ಅದು ಬಂದನಂತರ ಪರಿಶೀಲನೆ ಮಾಡುತ್ತೇನೆ, ಇದರ ಅವಶ್ಯಕತೆ ಇದೆಯೆಂದು ನನಗೂ ಅನ್ನಿಸುತ್ತದೆ. ಖಂಡಿತವಾಗಿ ಇದನ್ನು ಒದಗಿಸಿಕೊಡುತ್ತೇವೆಂದು ಹೇಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ಕುಣಬಿ ಸಮಾಜ ಎಂದು ಇದೆ, ಇವರು ಬುಡಕಟ್ಟು ಸಮಾಜಕ್ಕೆ ಸೇರಿದ್ದು, ಇವರಲ್ಲಿ ಅನೇಕ ಸಮಸ್ಯೆಗಳು ಇವೆ. ಅವರು ಶಾಲೆಗೆ ಹೋಗುವುದೆಂದರೆ ನಮಗೆ ಬಹಳ ಸಂತೋಷ ತರುವಂಥಾದ್ದು ನಾವು ಅವರಿಗೆ ಈ ಸೌಲಭ್ಯವನ್ನು ಕೊಡುವಂಥಾದ್ದು, ಇದು ಸರ್ಕಾರ ಕೊಡಬೇಕಾದಂತಹ ಪ್ರಾಥಮಿಕ ಅಗತ್ಯತೆ ಇದೆ. ಆದುದರಿಂದ ಈ ಕುಣಬಿ ಸಮಾಜದ ಅಭಿವೃದ್ಧಿ ದೃಷ್ಟಿಯಿಂದ ಮತ್ತು ಅವರು ಶೈಕ್ಷಣಿಕವಾಗಿ ಮುಂದೆ ಬರುವ ದೃಷ್ಟಿಯಿಂದ ಇವರಿಗೆ ಬಾಲಕಿಯರ ಹಾಸ್ಟೆಲ್ ಬೇಕೇ ಬೇಕು.

ಅಧ್ಯಕ್ಷರು : ಈಗ ಮಾನ್ಯ ಮಂತ್ರಿಯವರು ಅದನ್ನು ಪರಿಶೀಲನೆ ಮಾಡುತ್ತೇನೆ. ಅದನ್ನು ನಾವು ಕೊಡುತ್ತೇವೆಂದು ಮಾತನ್ನು ಹೇಳಿದ್ದಾರಲ್ಲಾ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನಮಗೆ ಉತ್ತರದಲ್ಲಿ ಅಗತ್ಯವಿದೆಯೆಂದು ಕೇಳಿದ್ದೇವೆ.

ಅಧ್ಯಕ್ಷರು : ಅವರು ಸದನದಲ್ಲಿ ಏನು ಉತ್ತರವನ್ನು ಹೇಳಿದ್ದಾರೆ, ಅದನ್ನು ತೆಗೆದುಕೊಳ್ಳಬೇಕು ಅವರು ಹೇಳಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಆದರೆ ಅದನ್ನು ವಿಶೇಷವಾಗಿ ಗಮನಿಸಬೇಕು. ಇಲ್ಲಿ ಮಾನ್ಯ ಉಸ್ತುವಾರಿ ಸಚಿವರು ಇದ್ದಾರೆ. ಅಲ್ಲಿಯ ಸಮಸ್ಯೆಗಳು ಅವರಿಗೂ ಗೊತ್ತಿದೆ. ಮಾನ್ಯ ಆರ್.ವಿ. ದೇಶಪಾಂಡೆಯವರಿಗೂ ಗೊತ್ತಿದೆ. ಈ ಜೊಯಿಡಾ ತಾಲ್ಲೂಕಿನಲ್ಲಿ ಕುಣಬಿಯವರು ಹೆಚ್ಚಿಗೆ ಇರುವುದಿರಂದ, ಅಲ್ಲಿ ಬಾಲಕಿಯರ ವಸತಿ ನಿಲಯ ಬೇಕೆಂದು ಶ್ರೀ ಗಂಗಾಧರ್ ಭಟ್‌ರವರು ಪ್ರಶ್ನೆಯನ್ನು ಕೇಳಿದ್ದಾರೆ, ಇದಕ್ಕೆ ಸರ್ಕಾರ ನಮ್ಮ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ, ಇದರ ಅಗತ್ಯವಿದೆಯೆಂದು ನನಗನ್ನಿಸಿದೆ, ಅದನ್ನು ಕೊಡುತ್ತೇವೆಂದು ಹೇಳಿದ್ದಾರೆ, ತಾವು ಸಚಿವರು ಇದ್ದೀರಿ, ತಮಗೂ ಆ ಸಮಾಜದ ಶೈಕ್ಷಣಿಕ ಪರಿಸ್ಥಿತಿ ಇದೆಯೆಂಬುದು ಗೊತ್ತಿದೆ. ಆದುದರಿಂದ ತಾವೂ ಸಹ ಹಾಸ್ಟೆಲ್ ಅನು ಮಂಜೂರು ಕೊಡಬೇಕೆಂದು ನಾನು ತಮ್ಮ ಮುಖಾಂತರ ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು : ಆಯಿತು, ಇನ್ನು ತಾವು ಕುಳಿತುಕೊಳ್ಳಿ, ಈಗ ಪ್ರಶ್ನೋತ್ತರ ನಡೆಯುತ್ತಿದೆ, ಮಾನ್ಯ ಮಂತ್ರಿಯವರು ಉತ್ತರವನ್ನು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾನು ಈ ಸದನದ ಮೂಲಕ ರಾಜೀನಾಮೆಯನ್ನು ಕೇಳಿದ್ದೆ. ಇನ್ನು ಕೇಳುವುದಕ್ಕೆ ಹೋಗುವುದಿಲ್ಲ. ನಾನು ಕೇಳಿದ್ದನ್ನು ಹಿಂತೆಗೆದುಕೊಂಡಿದ್ದೇನೆ. ಮಾನ್ಯ ಮಂತ್ರಿಯವರಿಗೆ ಹುಷಾರಿಲ್ಲ, ನನ್ನ ಮೇಲೆ ತಪ್ಪು ತಿಳಿದುಕೊಂಡು, ನೀವು ಖಾಯಿಲೆ ಗೀಯಲೆ ಬಿದ್ದುಬಿಡುತ್ತೀರಿ ಎಂದು ನಾನು ಕೇಳಿರುವಂತಹ ರಾಜೀನಾಮೆಯನ್ನು ಹಿಂದಕ್ಕೆ ಪಡೆದಿದ್ದೇನೆ.

ಡಾ.ವೈ. ನಾಗಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿಶ್ವೇಶ್ವರ ಹೆಗಡೆಯವರು ಕೇಳಿರುವ ವಿಷಯದ ಬಗ್ಗೆ, ಇದು ನಿಜವಾಗಿ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುವಂತಹ ವಿಚಾರವಾಗಿದೆ. ಇದರ ಬಗ್ಗೆ ಗಮನಹರಿಸಿ, ತೀವ್ರಗತಿಯಾಗಿ ಪರಿಶೀಲನೆ ಮಾಡಿ, ಮತ್ತೆ ನಮ್ಮ ಉಸ್ತುವಾರಿ ಮಂತ್ರಿಗಳಾದ ಶ್ರೀ ಆರ್.ವಿ. ದೇಶಪಾಂಡೆಯವರು ಇದ್ದಾರೆ, ಅವರೂ ಕೇಳಿದ್ದಾರೆ, ಇದರ ಬಗ್ಗೆ ನಿಜವಾಗಿ ಚಿಂತನೆ ಮಾಡಿ, ಈ ವಿದ್ಯಾರ್ಥಿ ನಿಲಯವನ್ನು ಒದಗಿಸುತ್ತೇವೆಂದು ಈ ಸದನದ ಮೂಲಕ ಹೇಳಲಿಚ್ಛಿಸುತ್ತೇನೆ.

ವಿರಾಜ ಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ಗಿರಿಜನ ಬಾಲಕರ ವಸತಿ ಶಾಲೆ ನಿರ್ಮಾಣದಲ್ಲಿ ಹಣ ದುರ್ಬಳಕೆ

34(1148) ಶ್ರೀ ಬಸವರಾಜ್ ಹೆಚ್.ಡಿ. (ವಿರಾಜ ಪೇಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಾಳುಗೋಡು ಗಿರಿಜನ ಬಾಲಕರ ವಸತಿ ಶಾಲೆ ನಿರ್ಮಾಣಕ್ಕೆ ಸರ್ಕಾರದ (ಕೇಂದ್ರ) ಹಣ ಬಳಕೆ ಮಾಡಿಕೊಂಡಿದೆಯೇ :

ಆ) ಬಳಕೆ ಮಾಡಿದಲ್ಲಿ ಇದರಲ್ಲಿ ಬಹಳಷ್ಟು ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ದುರ್ಬಳಕೆ ಸ್ವರೂಪಗಳೇನು, ಇದರಲ್ಲಿ ಅವ್ಯವಹಾರವಾಗಿರುವ ಹಣವೆಷ್ಟು;

ಇ) ಕಳಪೆ ಕಾಮಗಾರಿ ಕೈಗೊಂಡಿದ್ದಲ್ಲಿ ಯಾವ ಕ್ರಮವನ್ನ ಸರ್ಕಾರ ಕೈಗೊಂಡಿದೆ;

ಈ) ಈ ವಸತಿ ಶಾಲೆ ಪ್ರಾರಂಭಕ್ಕೆ ಸರ್ಕಾರ ಯಾವ ಅಗತ್ಯ ಕ್ರಮವನ್ನು ಕೈಗೊಳ್ಳುಲಿದೆ ;

ಉ) ಜಿಲ್ಲೆಯಲ್ಲಿರುವ ವಸತಿ (ಆಶ್ರಮ) ಶಾಲೆಗಳುಎಷ್ಟು ? ಹೊಸದಾಗಿ ಮಂಜೂರು ಮಾಡಲು ಉದ್ದೇಶಿಸಿರುವ ಸ್ಥಳಗಳಾವುವು ?

ಶ್ರೀ ಬಸವರಾಜ್ ಹೆಚ್.ಡಿ. (ಸಮಾಜ ಕಲ್ಯಾಣ ಸಚಿವರು):

ಅ) ಹೌದು,

ಆ) ಯಾವುದೇ ರೀತಿಯ ಅವ್ಯವಹಾರಗಳು ನಡೆದಿರುವುದು ಗಮನಕ್ಕೆ ಬಂದಿರುವುದಿಲ್ಲ

ಇ) ಕಾರ್ಯನಿರ್ವಾಹಕ ನಿರ್ದೇಶಕರು ಕಾಮಗಾರಿಯು ತೃಪ್ತಿಕರವಾಗಿದೆ ಎಂದು ವಂದಿಸಿದ್ದಾರೆ.

ಈ) ಪ್ರಸಕ್ತ ಖಾಸಗಿ ಕಟ್ಟಡದಲ್ಲಿ ನಡೆಯುತ್ತಿರುವ ವಸತಿ ಶಾಲೆಯನ್ನು ನೂತನ ಕಟ್ಟಡಕ್ಕೆ ಸ್ಥಳಾಂತರಿಸಲು ಕಾರ್ಯನಿರ್ವಾಹಕ ನಿರ್ದೇಶಕರು ದಿ : 5–11–2004ರಂದು ನಿರ್ದೇಶನ ನೀಡಿರುತ್ತಾರೆ.

ಉ) ಜಿಲ್ಲೆಯಲ್ಲಿ ಒಟ್ಟು 12 ಪರಿಶಿಷ್ಟ ವರ್ಗದ ಆಶ್ರಮಶಾಲೆಗಳು ಇರುತ್ತವೆ. ಹೊಸದಾಗಿ ಪರಿಶಿಷ್ಟ ವರ್ಗದ ಆಶ್ರಮ ಶಾಲೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.